# ಶ್ರೀನಿವಾಸ ನೀನೇ ಪಾಲಿಸೋ ಶ್ರಿತಜನ ಪಾಲ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahity, Samputa 3.1 published by Kannada & Culture Dept, Govt of Karnataka, Bengaluru.
3. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** Lyrics in Ref. 1 and Ref. 2 are matching. In Ref. 3, there are few differences which are marked in yellow highlights.

ರಾಗ ಆನಂದ ಭೈರವಿ ಆದಿ ತಾಳ

ಶ್ರೀನಿವಾಸ ನೀನೇ ಪಾಲಿಸೋ ಶ್ರಿತ ಜನ ಪಾಲ
ಗಾನಲೋಲ ಶ್ರೀ ಮುಕುಂದನೇ || ಪ ||

ಧ್ಯಾನ ಮಾಳ್ಪ ಸಜ್ಜನರ ಮಾನದಿಂ (ಪರಿಪಾಲಿಪ) (ಪರಿಪಾಲಿಸುವ)*
ವೇಣುಗೋಪಾಲ ಗೋವಿಂದ ವೇದವೇದ್ಯ ನಿತ್ಯಾನಂದ || ಅಪ ||

ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ
ಎಂದಿಗೆ ಲಭ್ಯವೋ ಮಾಧವ
ಅಂಧಕಾರಣ್ಯದಲ್ಲಿ (ನೊಂದು ತತ್ತಳಿಸುತಿಹ) (ನಿಂದು ತತ್ತರಿಸುತಿಹೆನೊ)
(ಅಂದದಿಂದ ಈ ಭಾವದಿ ನಿಂದು ನೊಂದೆನೊ ಮುಕುಂದ) || 1 ||
(ಅಂದದಿಂ ಭವಾಬ್ಧಿಯೊಳು ನಿಂದು ನೊಂದೆನೊ ಗೋವಿಂದ)

ಎಷ್ಟು ದಿನ ಕಷ್ಟಪಡುವುದೊ ಯಶೋದೆ ಕಂದ
ದೃಷ್ಟಿಯಿಂದ ನೋಡಲಾಗದೆ
(ಮುಟ್ಟಿ ನಿನ್ನ ಭಜಿಸುವನಲ್ಲ ಕೆಟ್ಟ ನರಜನ್ಮದವನು
ದುಷ್ಟ ಕಾರ್ಯ ಮಾಡಿದರು ಇಷ್ಟನಾಗಿ ಕೈಯ ಪಿಡಿದು) || 2 ||
(ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ನರಜನ್ಮದವ
ದುಷ್ಟ ಕಾರ್ಯ ಮಾಡಿದಾಗ್ಯು ಇಷ್ಟನಾಗಿ ಕೈಯ ಪಿಡಿಯೊ)

ಅನುದಿನ ಅನೇಕ ರೋಗಗಳ ಅನುಭವಿಸಿದೆನೊ
(ಘನ ಮಹಿಮ ನೀನೆ ಬಲ್ಲೆಯಾ) (ಘನ ಮಹಿಮನೆ ಕೇಳಯ್ಯ)
ತನುವಿನಲ್ಲಿ ಬಲವಿಲ್ಲ ನೆನೆದ (ಮಾತ್ರ ಸಲಹುವ) (ಮಾತ್ರದಿ ಸಲಹೊ ಎನ್ನ)
ಹನುಮದೀಶ ಪುರಂದರ ವಿಠ್ಠಲ ನೀ ಎನಗೆ ಒಲಿದು (ವಿಠಲನೇ ಕೈಯ ಪಿಡಿದು) || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಾನದಿಂ** – ಆದರದಿಂದ, ತನ್ನವರೆಂಬ ಅಭಿಮಾನದಿಂದ.

**ಇಷ್ಟನಾಗಿ** – ಪರಮಾಪ್ತನೆನಿಸಿದ ಬಿಂಬರೂಪೀ ಪರಮಾತ್ಮ.

**ಅಂಧಕಾರಣ್ಯದಲ್ಲಿ** – ಸಂಸಾರವೆಂಬ ಕತ್ತಲೆಯ ಕಾಡಿನಲ್ಲಿ.

**ಹನುಮದೀಶ** – ಮುಖ್ಯಪ್ರಾಣನಿಗೆ ಅಂತರ್ಯಾಮಿಯಾದ.

**ವೇದವೇದ್ಯ** – ನಿಗಮಗೋಚರ

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, Vishnu Stuti, Jeevanoddhara
**Group Words:** Vishnu, srinivasa, hanuma, mukunda, venugopala, koosu, Krishna, Madhava, sukha, kaadu, Dhyana, nara, janma, bhajane, roga, anubhava, deha,
**Pravachana:** NA
**Explanation:** NA